O.S. No. 144-2019
P.W. - 1

**<u>ದಿನಾಂಕಃ 19-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಪಿ ಬಿ, ಮಾನ್ಯ ವಕೀಲರಿಂದ ವಾದಿಯರ ಪರವಾಗಿಃ-</u>***

ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ ಎಂದು ಹೇಳುತ್ತಾರೆ. ಸಾಕ್ಷಿ ದಾಖಲೆಗಳನ್ನು ಹಾಜರು ಪಡಿಸಿದ್ದು ಈ ಕೆಳಕಂಡಂತೆ ಗುರುತಿಸಲಾಯಿತು.

*ನಿಪಿ- 1 – UDR ವರದಿಯ ದೃಢಿಕೃತ ನಕಲು,

*ನಿಪಿ- 2 - ದೂರಿನ ದೃಢಿಕೃತ ನಕಲು,

*ನಿಪಿ- 3 – ಶವ ಪಂಚನಾಮೆಯ ದೃಢಿಕೃತ ನಕಲು,

*ನಿಪಿ- 4 - ಪಿ ಎಂ ವಿ ವರದಿಯ ದೃಢಿಕೃತ ನಕಲು,

*ನಿಪಿ- 5 – ಅಂತಿಮ ವರದಿಯ ದೃಢಿಕೃತ ನಕಲು,

*ನಿಪಿ- 6 – ಸ್ಥಳ ಪಂಚನಾಮೆಯ ದೃಢಿಕೃತ ನಕಲು,

ಅದ್ದರಿಂದ ನನ್ನ ದಾವೆಯನ್ನು ನನ್ನ ಪ್ರಾರ್ಥನೆಯಂತೆ ಡಿಕ್ರಿ ಮಾಡಬೇಕೆಂದು ವಿನಂತಿ.

***<u>ಪಾಟೀ ಸವಾಲುಃ</u>***-ಶ್ರೀ ಎಂ .ಎಸ್. ಹೆಚ್. ಮಾನ್ಯ ವಕೀಲರಿಂದ 4 ನೇ ಪ್ರತಿವಾದಿಯ ಪರವಾಗಿಃ

ಈ ಪ್ರಕರಣಕ್ಕಿಂತ ಮೊದಲು ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ. ನಾನು ಈ ಹಿಂದೆ ಇದೆ ಪ್ರಕರಣದಲ್ಲಿ ನುಡಿದ ಸಾಕ್ಷಿ ಎಲ್ಲಾ ನಿಜ ಇರುತ್ತದೆ. ಈಗ ನಾನು ದಾಖಲಿಸಿದ ಪ್ರತಿಜ್ಞಾಲೇಖದಲ್ಲಿ ನನ್ನ ಉದ್ಯೋಗ ಕೆ. ಎಸ್. ಆರ್. ಟಿ. ಸಿ.

ನಿರ್ವಾಹಕ ಅಂತಾ ಬರೆದಿರುತ್ತೇನೆ ಎಂದರ ಸರಿ. ಈ ಹಿಂದೆ ನಾನು ಈ ಪ್ರಕರಣದ ಮುಖ್ಯ ವಿಚಾರಣೆಯಲ್ಲಿ ನಾನು ಖಾಸಗಿ ಉದ್ಯೋಗ ಮಾಡುತ್ತಿದ್ದು ಬಡತನದಲ್ಲಿರುತ್ತೇನೆ ಅಂತಾ ಬರೆದಿರುತ್ತೇನೆ ಎಂದರೆ ಸಾಕ್ಷಿದಾರರು ನ್ಯಾಯಾಲಯದ ಶುಲ್ಕ ಉಳಿಸಲು ನಾನು ಹಾಗೆ ಹೇಳಿರುತ್ತೇನೆ ಎಂದು ಹೇಳುತ್ತಾರೆ. ಈಗ ನನಗೆ ಓದಿ ಹೇಳಿದ Misc No. 49/2016 ನಲ್ಲಿಯ ಪಾಟೀ ಸವಾಲಿನಲ್ಲಿ ಓದಿ ಹೇಳಿದಂತೆ ನನ್ನ ಮಗಳ ಶಾಲೆಗೆ ಪ್ರತಿ ವರ್ಷಕ್ಕೆ 1200 ರೂ ಶುಲ್ಕ ಕಟ್ಟುತ್ತೇನೆ. ಮೃತ ಮಗ ಎಸ್ ಎಲ್ ಎಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ. ಆತನ ಕಾಲೇಜಿನ ಖರ್ಚು ವರ್ಷಕ್ಕೆ 50 ಸಾವಿರ ಬರುತ್ತಿದ್ದು. ನಾನು ಮನೆ ಕಟ್ಟುವಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾನು ಪ್ರತಿ ದಿನಕ್ಕೆ 300-350 ರೂ ದುಡಿಯುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಸಾಕ್ಷಿ ವಿಚಾರಣೆಯ ಮೇಲೆ ನನ್ನ ಸಹಿ ಇರುತ್ತದೆ ಎಂದರೆ ಸರಿ. 4 ನೇ ಪ್ರತಿವಾದಿ ಶಾಲೆ ಕಪೌಂಡ ಗೋಡೆ 10 ಫೀಟ್ ಎತ್ತರ ಇದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಶಾಲಾ ಆವರಣದೊಳಗೆ ಹೊಗಬೇಕಾದರೆ 4 ನೇ ಪ್ರತಿವಾದಿ ಪರವಾನಿಗೆ ತೆಗದುಕೊಂಡು ಹೋಗಬೇಕಾಗುತ್ತದೆ ಎಂದರೆ ಸಾಕ್ಷಿದಾರರು ಹುಡುಗಡರು ಆಟವಾಡುತ್ತಾ ಒಳೆ ಹೋಗಿರುತ್ತಾರೆ ಅಂತಾ ಹೇಳುತ್ತಾರೆ. 4 ನೇ ಪ್ರತಿವಾದಿಯ ಕಪೌಂಡ ಒಳಗೆ ಇರುವ ವಿದ್ಯುತ್ ವೈಯರ್‌ಗೂ ಮತ್ತು 4 ನೇ ಪ್ರತಿವಾದಿಗೂ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಬಾಳೆಗೊನೆ ತೆಗೆಯಲು ಹೋೀಗಿ ತನ್ನ ತಪ್ಪಿ ನಿಂದ ವಿದ್ಯುತ್ ಜೀವಂತ ವೈಯರ್ ತಾಗಿಸಿಕೊಂಡು ತನ್ನ ನಿರ್ಲಕ್ಷ್ಯತನದಿಂದ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ವೈಯರ್ ಕಪೌಂಡ ಗೋಡೆಕ್ಕಿಂತ 10 ಅಡಿ ಎತ್ತರದಲ್ಲಿದೆ ಎಂದರೆ ನಾನು ನೋಡಿರುವುದಿಲ್ಲ. ಕಪೌಂಡ ಗೋಡೆಗೂ ಮತ್ತು ಬಾಳೆ ಗಿಡಕ್ಕೂ ತುಂಬ ಅಂತರ ಇದೆ ಅಂದರೆ ಸರಿಯಲ್ಲ.

ಬಾಳೆ ಗಿಡಕ್ಕೆ ವಿದ್ಯುತ್ ವೈಯರ್ ತಾಗಿರುವುದಿಲ್ಲ ಎಂದರೆ ಸರಿ. ನನ್ನ ಮಗ ಬಾಳೆಗೋಣಿ ತೆಗೆದುಕೊಂಡು ಕಪೌಂಡ ಮೇಲೆ ಹತ್ತಿದಾಗ ಬಾಳಗೊಣೆಗೆ ವಿದ್ಯುತ್ ವೈಯರ್ ತಾಕಿರುತ್ತದೆ ಎಂದರೆ ಸಾಕ್ಷಿದಾರರು ಬಾಳೆಗೊಣೆಗೆ ತಾಕಿ ಸತ್ತಿರುತ್ತಾನೋ ಅಥವಾ ಆತನೆ ತಾಕಿ ಸತ್ತಿರುತ್ತಾನೋ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ 4 ನೇ ಪ್ರತಿವಾದಿಯನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಇಂಜಿನೀಯರಿಂಗ್ ಮತ್ತು 5000/- ರೂ ಸಂಪಾದನೆ ಮಾಡುತ್ತಿದ್ದ ಅಂತಾ ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ತನ್ನ ಹೊಣೆಗಾರಿಕೆಯಿಂದ ಸತ್ತಿದ್ದು ಅದಕ್ಕೆ ಬೇರೆ ಯಾರು ಹೊಣೆಗಾರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಈ ಹಂತರದಲ್ಲಿ ಪ್ರತಿವಾದಿ ನಂಬರ 1 ರಿಂದ 3 ನೇ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**